# ಆಹಾ ಸುದ್ದಿ!

★ ಸಸಿತೋಟ



ಚೀನಾದ ಶಾಂಡಾಂಗ್ ಪ್ರಾಂತ್ಯದ ಅಪಾರ್ಟ್‌ಮೆಂಟ್ ಒಂದರಿಂದ ಸರ್ಕಾರಿ ಸಿಬ್ಬಂದಿ ರಾಶಿ ಕಸವನ್ನು ಹೊರಹಾಕಿ ನಿಟ್ಟುಸಿರುಬಿಟ್ಟರು. ಅದರ ನಿವಾಸಿಯಾದ ವೃದ್ಧೆಯೊಬ್ಬರು ಹಲವಾರು ವರ್ಷಗಳಿಂದ ಕಸವನ್ನೆಲ್ಲಾ ಮನೆಯಲ್ಲೇ ಸಂಗ್ರಹಿಸಿಟ್ಟುಕೊಂಡಿದ್ದು, ಅಕ್ಕಪಕ್ಕದವರು ದೂರು ಕೊಡಬೇಕಾಯ್ತಂತೆ. ಬೆಂಗಳೂರಿನಲ್ಲಿ ಕಸ ಬೀದಿಗೆ ಬಂದರೆ ಚೀನಾದ್ದು ಉಲ್ಟಾ ಕೇಸ್.

ಇಂಗ್ಲೆಂಡ್‌ನ ಯಾರ್ಕ್‌ನಲ್ಲಿ ನಿಮಿಷಕ್ಕೆ 43 ಬಾರಿಯಂತೆ 20 ನಿಮಿಷಗಳ ಕಾಲ ಬೊಗಳಿದ ನಾಯಿಗೆ ಅಂದರೆ ನಾಯಿಯ ಮಾಲೀಕನಿಗೆ ದಂಡ ವಿಧಿಸಲಾಗುವುದಂತೆ. ನಾಯಿಗೇನೋ ಬೊಗಳುವುದು ಸಲೀಸು. ಮಾಲೀಕನೂ ಆರಾಮವಾಗಿ ದಂಡ ಕಟ್ಟಬಹುದು. ಆದರೆ ನಾಯಿ ಎಷ್ಟು ಬಾರಿ ಬೊಗಳುತ್ತದೆ ಎಂದು ಎಣಿಸುತ್ತ ಮನೆಯ ಹೊರಗಡೆ ನಿಲ್ಲುವ ಸ್ಥಳಿಯ ಆಡಳಿತದ ಸಿಬ್ಬಂದಿಗೆ ಯಾಕೆ ಶಿಕ್ಷೆ?



ಇಂಗ್ಲೆಂಡ್‌ನಲ್ಲಿ ಅತಿ ದೊಡ್ಡ ಫಲ- ಪುಷ್ಪ ಪ್ರದರ್ಶನ ನಡೆಯುತ್ತಿದ್ದು, ಜೈಗಾಂಟೊಮೊ ತಳಿಯ ಟೊಮೆಟೊ ಸ್ಪರ್ಧೆ ಏರ್ಪಡಿಸಲಾಗಿದೆಯಂತೆ. ಇದೇ ತಳಿಯದ್ದು ಎಂದು ಖಾತ್ರಿ ಮಾಡಿಕೊಳ್ಳಲು ಸ್ಪರ್ಧೆಗೆ ಬಂದ ಟೊಮೆಟೋಗಳ ಡಿಎನ್‌ಎ ಪರೀಕ್ಷೆ ನಡೆಸಿ ಬಹುಮಾನ ನೀಡಲಾಗುವುದಂತೆ. ವಂಚಕರಿಗೂ, ಡಿಎನ್‌ಗೂ ಇರುವ ನಂಟು ಟೊಮೆಟೋವರೆಗೂ ಮುಂದುವರಿದಿದೆ.



ಎಸ್ಸೆಕ್ಸ್‌ನ ಜಾನಿ ಸ್ಟ್ರೇಂಜ್ 677 ತೂಕದ ಸೆಸ್ನಾ ವಿಮಾನವನ್ನು 20 ಮೀಟರ್‌ವರೆಗೆ ಎಳೆದು ಗಿನ್ನೆಸ್ ದಾಖಲೆ ಮಾಡಿದ. ಅದೂ ಕಿವಿಯ ತೂತಿಗೆ ಹಗ್ಗ ಕಟ್ಟಿಕೊಂಡು ಎಳೆದಿದ್ದೂ ನಿಜಕ್ಕೂ ಸ್ಟ್ರೇಂಜೇ ಬಿಡಿ.

ರಷ್ಯಾದಲ್ಲಿ ಐದು ವರ್ಷ ವಯಸ್ಸಿನ ಇಬ್ಬರು ಬಾಲಕರು ಶಿಶುಕೇಂದ್ರದ ಉದ್ಯಾನದಲ್ಲಿ ಸುರಂಗ ಕೊರೆದು ಅದರ ಮೂಲಕ ನುಸುಳಿ ಜಾಗ್ವಾರ್ ಕಾರು ಖರೀದಿಗೆಂದು ಶೋರೂಮಿಗೆ ತೆರಳಿದ್ದರಂತೆ. ಶಿಕ್ಷಕಿಯರ ಕಣ್ಣು ತಪ್ಪಿಸಿ ಉದ್ಯಾನದ ಸಲಿಕೆಯಿಂದ ನೆಲ ಅಗೆದು ಸುರಂಗ ಕೊರೆದ ಈ ಪುಟಾಣಿಗಳು ಕೆಲವು ಮೈಲುಗಳ ಅಂತರದಲ್ಲಿರುವ ಶೋರೂಮಿಗೆ ತೆರಳಿ 'ನಮಗೆ ಬೆಳೆದ ಕಾರು ಬೇಕು' ಎಂದರಂತೆ. ಈಗ ಶಿಶುಕೇಂದ್ರದ ಬೆಳೆದ ಶಿಕ್ಷಕಿಯರು ಶಿಕ್ಷೆ ಅನುಭವಿಸಬೇಕಾಗಿದೆ.



ರಷ್ಯಾದ ಖ್ಯಾತ ನಟ ಇವಾನ್ ತನ್ನ ಹಳೆಯ ವಿದ್ಯಾರ್ಥಿನಿ ನಟಾಲ್ಯಾಳನ್ನು ಈಚೆಗೆ ಮದುವೆಯಾದನಂತೆ. ಮೇಷ್ಟ್ರು ವಿದ್ಯಾರ್ಥಿನಿಯನ್ನು ಬಾಳಸಂಗಾತಿಯನ್ನಾಗಿ ಮಾಡಿಕೊಳ್ಳುವ ಈ ಗುರು ಪರಂಪರೆ ಹೊಸದೇನಲ್ಲ ಎಂದು ಸುಮ್ಮನಾಗಿಬಿಡಬಹುದಿತ್ತು. ಆದರೆ ಇಬ್ಬರಿಗೂ ಬರೋಬ್ಬರಿ 61 ವರ್ಷಗಳ ಅಂತರ. ಇವಾನ್ ಅಜ್ಜನಿಗೆ 85 ವರ್ಷವಾದರೆ, ಹೆಂಡತಿಗೆ 24 ವರ್ಷವಂತೆ. ಕಾಂಗ್ರೆಸ್‌ನ ದಿಗ್ಗಿ ರಾಜಾ (ದಿಗ್ವಿಜಯ್ ಸಿಂಗ್)ಗೆ ಇವಾನ್ ಪ್ರೇರಣೆಯೋ ಅಥವಾ ಇವಾನ್‌ಗೆ ದಿಗ್ಗಿ ಸ್ಫೂರ್ತಿಯೋ!